ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 4, September-October 2024, Pp.68-72
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕನ್ನಡ ಸಾಹಿತ್ಯದಲ್ಲಿ ಸ್ತ್ರೀಪರ ದೃಷ್ಟಿಕೋನಗಳು

**ನಂಜುಂಡಸ್ವಾಮಿ ಎಸ್[1] ಮತ್ತು ಡಾ.ಬಿ.ಎಂ.ಗೀತಾಂಜಲಿ[2]**
[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮುಕ್ತಗಂಗೋತ್ರಿ, ಮೈಸೂರು.

***Abstract:***
*ಪ್ರಸ್ತುತ ಲೇಖನದಲ್ಲಿ ಕನ್ನಡ ಸಾಹಿತ್ಯದಲ್ಲಿ ಸ್ತ್ರೀಪರ ದೃಷ್ಟಿಕೋನಗಳನ್ನು ವಿಶ್ಲೇಷಿಸಲಾಗಿದೆ. ಕಾವ್ಯ, ಕಾದಂಬರಿ, ಪ್ರಬಂಧ ಮೊದಲಾದ ವಿಭಿನ್ನ ಸಾಹಿತ್ಯ ಪ್ರಕಾರಗಳ ಮೂಲಕ ಮಹಿಳೆಯರ ಪಾತ್ರ, ಸವಾಲುಗಳು ಮತ್ತು ಸಬಲೀಕರಣದ ಚಿತ್ರಣವನ್ನು ಅಧ್ಯಯನ ಮಾಡಲಾಗಿದ್ದು, ಸಾಂಪ್ರದಾಯಿಕ ಚಿತ್ರಣದಿಂದ ಆಧುನಿಕ ಕಥಾನಕಗಳವರೆಗೆ ಮಹಿಳಾ ಚಿಂತನೆ ಹೇಗೆ ಬದಲಾಗುತ್ತಿದೆ ಎಂಬುದನ್ನು ತೋರಿಸಲಾಗುತ್ತದೆ. ಈ ಅಧ್ಯಯನವು ಲಿಂಗ ಸಮಾನತೆ ಮತ್ತು ಮಹಿಳಾ ಹಕ್ಕುಗಳ ಕುರಿತು ಕನ್ನಡ ಸಾಹಿತ್ಯದ ಪ್ರಭಾವವನ್ನು ಹಾಗೂ ಸಮಾಜದಲ್ಲಿ ಮೂಡಿಸಿರುವ ಬದಲಾವಣೆಗಳನ್ನು ವಿವರಿಸುತ್ತದೆ.*

***Keywords:*** *ಸ್ತ್ರೀಪರ ದೃಷ್ಟಿಕೋನ, ಕನ್ನಡ ಸಾಹಿತ್ಯ, ಲಿಂಗ ಸಮಾನತೆ, ಮಹಿಳಾ ಸಬಲೀಕರಣ, ಸಾಹಿತ್ಯ ವಿಶ್ಲೇಷಣೆ.*

**ಪೀಠಿಕೆ**

ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಗೆ ನೀಡಿರುವ ಸ್ಥಾನಮಾನಗಳು ಕಾಲದಿಂದ ಕಾಲಕ್ಕೆ ಬದಲಾಗುತ್ತಲೇ ಬಂದಿದೆ. ವೇದಕಾಲದಿಂದ ಹಿಡಿದು ಆಧುನಿಕ ದಿನಗಳವರೆಗೆ ಮಹಿಳೆಯರ ಬದುಕಿನ ಬಗೆಗಿನ ದೃಷ್ಟಿಕೋನಗಳು ಬದಲಾಗಿವೆ. ಮಹಿಳೆಯರು ಯಜಮಾನ ಸಂಸ್ಕೃತಿಯ ಸುಳಿಯಲ್ಲಿ ಸಿಲುಕಿ ನಲುಗಿ ಹೋಗಿದ್ದಾರೆ. ಪ್ರಾಣಿಗಳಿಗಿಂತಲೂ ಕೀಳಾಗಿ ಕಾಣಲ್ಪಟ್ಟಿದ್ದಾಳೆ. ಮಾತೃಪ್ರಧಾನ ಸಂಸ್ಕೃತಿಯಲ್ಲಿ ಅತ್ಯುನ್ನತವಾದ ಸ್ಥಾನ ಪಡೆದಿದ್ದು, ಸಾಮಾಜಿಕವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಯುದ್ಧದಲ್ಲಿ ಭಾಗಿಯಾಗುತ್ತಿದ್ದರಂತೆ, ಶಿಕ್ಷಣ ಪಡೆಯುವಲ್ಲಿ ಅವಕಾಶವಿದ್ದು, ಮನೆಯ ಜವಾಬ್ದಾರಿಯನ್ನು ನಿಭಾಯಿಸುತ್ತಿದ್ದು ತದನಂತರ ಶ್ರಮದ ಕೆಲಸಗಳು(ಕೃಷಿ ಚಟುವಟಿಕೆ)ಗಳಲ್ಲಿ ಪುರುಷರ ಭಾಗವಹಿಸುವಿಕೆ ಹೆಚ್ಚಾದಾಗ ಮಹಿಳೆಯರು ಪುರುಷರ ಆಶ್ರಯದಲ್ಲಿ ಜೀವನ ಸಾಗಿಸುವ ಪರಿಸ್ಥಿತಿ ಬಂದಿತು. ಶಿಕ್ಷಣದಿಂದ ವಂಚಿತರಾದರು. ಸಂಪ್ರದಾಯದ ಕಬಂಧಬಾಹುವಿನಲ್ಲಿ ಬಾಲ್ಯವಿವಾಹ, ಸತಿಸಹಗಮನ, ಜೋಗತಿ ಸಂಪ್ರದಾಯ, ವಿಧವಾ ಪದ್ಧತಿ ಪಾಲನೆಗಳಂತಹ ಹಲವಾರು ಕೋನಗಳಲ್ಲಿ ಸಾಮಾಜಿಕವಾಗಿ ಶೋಷಿಸಲ್ಪಟ್ಟರು. ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಯರನ್ನು ಆದಿಶಕ್ತಿಯೆಂದು ವರ್ಣಿಸಿದ್ದಾರೆ. ದೇವತೆಯೆಂದು ಪೂಜಿಸಿದ್ದಾರೆ. ವಾಸ್ತವದಲ್ಲಿ ಮಹಿಳೆಯರನ್ನು ಹೀನಾಯವಾಗಿ

***Please cite this article as:*** ನಂಜುಂಡಸ್ವಾಮಿ ಎಸ್ ಮತ್ತು ಬಿ.ಎಂ.ಗೀತಾಂಜಲಿ. (2024). ಕನ್ನಡ ಸಾಹಿತ್ಯದಲ್ಲಿ ಸ್ತ್ರೀಪರ ದೃಷ್ಟಿಕೋನಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(4), 68–72

ನಡೆಸಿಕೊಳ್ಳುತ್ತಿರುವುದು, ಭಾರತೀಯ ಸಂಸ್ಕೃತಿಗೆ ಸಂಚಾಕಾರವನ್ನುಂಟು ಮಾಡಿದೆ.

ಭಾರತೀಯ ಸಂಸ್ಕೃತಿಯನ್ನು ವಿದೇಶಿಗರು ಗೌರವದಿಂದ ಕಾಣುವ ಕಾಲವೊಂದಿತ್ತು. ಅದು ಬದಲಾಗಿ ಭಾರತದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ಪಟ್ಟಿ, ವಿದೇಶಿಗರ ಮುಂದೆ ತಲೆ ತಗ್ಗಿಸುವಂತೆ ಮಾಡಿದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳಾ ಪಾತ್ರ ಪುರುಷನ ಸೇವೆಗಾಗಿ ಮುಡುಪಾಗಿಡುವ ಸ್ಥಿತಿ ನಿರ್ಮಾಣವಾಗಿದೆ. ತಾಯಿಯಾಗಿ, ಹೆಂಡತಿಯಾಗಿ, ಮಗಳಾಗಿ, ಅತ್ತೆಯಾಗಿ ಮತ್ತು ಸೊಸೆಯಾಗಿ ಕುಟುಂಬದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಮಹಿಳೆಯರಿಗೆ ದ್ವಿತೀಯ ದರ್ಜೆಯ ಸ್ಥಾನಮಾನಗಳು ನೀಡುತ್ತಾ ಬಂದಿರುವುದು ಪುರುಷ ಪ್ರಧಾನ ವ್ಯವಸ್ಥೆಯ ಪಿತೂರಿಯಾಗಿದೆ. ಸಾಮಾಜಿಕ ವ್ಯವಸ್ಥೆಯನ್ನು ಪುರುಷ ಪರವಾಗಿ ವ್ಯವಸ್ಥಿತವಾಗಿ ಜಾರಿ ಮಾಡಿದ್ದು, ಪ್ರತಿ ಹಂತದಲ್ಲಿ ಸ್ವಾವಲಂಬನೆಯ ಬದುಕಿನ ಆಸೆಯನ್ನು ಕಮರುವಂತೆ ಮಾಡಲಾಗಿದೆ. ಬಾಲ್ಯದಲ್ಲಿ ತಂದೆಯ ಆಶ್ರಯದಲ್ಲಿ ಕಳೆಯಬೇಕು, ಶಿಕ್ಷಣವನ್ನು ಮೊದಲು ಗಂಡುಮಕ್ಕಳಿಗೆ ಪ್ರಾಮುಖ್ಯತೆ ನೀಡಿ, ತದನಂತರ ಹೆಣ್ಣುಮಕ್ಕಳ ಸರದಿ, ವೈವಾಹಿಕ ಜೀವನದಲ್ಲಿ ತಂದೆಯ ಆಯ್ಕೆಯೇ ಅಂತಿಮ. ಸ್ವಪ್ರತಿಷ್ಠೆಗಾಗಿ ವರದಕ್ಷಿಣೆಯನ್ನು ನೀಡಿ, ಅದರಲ್ಲಿನ ದಾಹಕ್ಕೆ ಬಲಿಯಾಗುವುದು ಮಾತ್ರ ಹೆಣ್ಣುಮಕ್ಕಳೆ ವರದಕ್ಷಿಣೆ ಪಡೆಯುವವನು ಪುರುಷ ನೀಡುವವನು ಪುರುಷ ವರದಕ್ಷಿಣೆ ಕಿರುಕುಳ ಅನಭವಿಸುವವಳು ಮಾತ್ರ ಮಹಿಳೆ. ಶ್ರೀನಿವಾಸ ವೈದ್ಯರ 'ಹಳ್ಳ ಬಂತು ಹಳ್ಳ' ಕಾದಂಬರಿಯಲ್ಲಿ ಬರುವ ವಾಸುದೇವಾಚಾರಿಯ ಮಗಳಾದ ಸೋನೀಯ ಸಾವಿನ ನಂತರ ಜನರ ಮಾತುಗಳಲ್ಲಿ "ಲಗ್ನಕ್ಕೆ ಇಷ್ಟೊಂದು ಗಡಿಬಿಡಿ ಮಾಡಬಾರದಾಗಿತ್ತು" "ಈಗಾಗಲೇ ಅವಗ ಒಂದು ಮದುವೆ ಆಗಿತ್ತಂತ.. ಮೊದಲನೇ ಹೆಂಡತಿನ್ನೂ ಹಿಂದ ಏನೋ ಮಾಡಿ ಕೊಂದಿದ್ದರಂತ... ತಾಯಿ ಮಗಗ ವಿಪರೀತ ಬಂಗಾರದ ಆಶಾ ಅಂತ... ಅತ್ತಿ ಬಹಳ ದುಷ್ಟ ಇದ್ದಾಲಂತ"[1] ಎಂಬ ಸನ್ನಿವೇಶದಲ್ಲಿ ತಂದೆ ಗಡಿಬಿಡಿಯ ಮದುವೆ ನಿರ್ಧಾರ, ಗಂಡನ ಬಂಗಾರದ ಆಸೆಗೆ ಸೋನೀ ಬಲಿಯಾಗುವುದು, ಪುರುಷನ ಸ್ವಪ್ರತಿಷ್ಠೆ ಮತ್ತು ದುರಾಸೆಯ ಸಲುವಾಗಿ ಮಹಿಳೆಯರ ಮೇಲಿನ ದೌರ್ಜನ್ಯ ನಿರಂತರವಾಗಿ ಸಾಗಿಬಂದಿದೆ. ಈ ವಿವರಣೆಯಲ್ಲಿ ಕಾದಂಬರಿಕಾರರು ಸಾಮಾಜಿಕ ವ್ಯವಸ್ಥೆಯ ಕರಾಳತೆಯ ವಿಚಾರವನ್ನು ತೆರೆದಿಡುವ ಪ್ರಯತ್ನ ಮಾಡಲಾಗಿದೆ.

ಕುಟುಂಬ ವ್ಯವಸ್ಥೆಯಲ್ಲಿ ಗಂಡು ಹೆಣ್ಣು ಕೂಡಿ ಬದುಕುವ ವ್ಯವಸ್ಥೆಯೂ ಪುರಾತನ ಕಾಲದಿಂದಲೂ ನಡೆದುಕೊಂಡು ಬಂದ ಸಾಮಾಜಿಕ ವ್ಯವಸ್ಥೆಯಾಗಿದೆ. ಈ ಸಾಮಾಜಿಕ ವ್ಯವಸ್ಥೆಯಲ್ಲಿ ಗಂಡು ಹೆಣ್ಣು ಸಮಾನರೆಂಬ ಭಾವನೆಗಳು ಕಾನೂನು ಪ್ರತಿಗಳು ಪ್ರತಿನಿಧಿಸುವಲ್ಲಿ ಮಾತ್ರ ಸಕ್ರಿಯವಾಗಿದ್ದು, ವಾಸ್ತವದಲ್ಲಿ ಮಹಿಳೆಯರು ಕುಟುಂಬದಲ್ಲಿಯಾಗಲಿ, ಸಮಾಜದಲ್ಲಿಯಾಗಲಿ ಎರಡನೆಯ ಸ್ಥಾನದಲ್ಲಿ ನಿಲ್ಲುತ್ತಾರೆ. ಕೌಟುಂಬಿಕ ವ್ಯವಸ್ಥೆಯಲ್ಲಿ ತಾಯಿಯಾಗಿ, ಹೆಂಡತಿಯಾಗಿ, ಮಕ್ಕಳ ಸಂರಕ್ಷಣೆ ಮಾಡುವುದು, ಗಂಡನ ಏಳಿಗೆಗಾಗಿ ದುಡಿಯುವ ತ್ಯಾಗಮಯಿಯಾಗಿ ಕಂಡುಬರುತ್ತಾಳೆ. ಮನೆಯ ನಾಲ್ಕುಗೋಡೆಯ ನಡುವೆ ಕನಸುಗಳು ಕಮರುತ್ತಿರಲು ಕುಟುಂಬದ ಉದ್ಧಾರಕ್ಕಾಗಿ ದುಡಿಯುತ್ತಲೆ ಬಂದಿದ್ದಾಳೆ. ಮನೆಯಿಂದ ಹೊರಬಂದು ಉದ್ಯೋಗದಲ್ಲಿ ತೊಡಗಿದ ಮಹಿಳೆಯು ಕಛೇರಿಯ ನಾಲ್ಕುಗೋಡೆಗಳ ನಡುವೆ ಬಂಧಿಯಾಗುತ್ತಾಳೆ. ಕೆಲಸ–ಕಾರ್ಯಗಳಲ್ಲಿ ಎರಡನೇ ದರ್ಜೆಯ ಸ್ಥಾನಮಾನಗಳು ನೀಡುತ್ತಿದ್ದ ಕಾಲ ಬದಲಾಗಿ, ಪುರುಷ ಸಮಾನ ಉದ್ಯೋಗಗಳಲ್ಲಿ ಮಹಿಳೆ ನೆಲೆಯನ್ನು ಕಂಡುಕೊಳ್ಳುವಲ್ಲಿ ಸಫಲರಾದರು. ಅಕ್ಷರಸ್ಥ ಮಹಿಳೆಯರು ಪುರುಷ ಸಿಬ್ಬಂದಿಯಿಂದ ಕಿರುಕುಳ ಅನುಭವಿಸುವ ಪರಿಪಾಟಲು ತಪ್ಪಿಲ್ಲ.

---

[1] ಶ್ರೀನಿವಾಸ ವೈದ್ಯ. (2017). *ಹಳ್ಳ ಬಂತು ಹಳ್ಳ*. ಪುಟ. 87

ಮಹಿಳೆ ಮನೆಯ ಒಳ–ಹೊರಗು ದುಡಿಯುವುದರಿಂದ ವಿಭಿನ್ನ ಅನುಭವಗಳ ಬದುಕನ್ನು ಹಾಗೂ ಎದುರಾಗುವ ಸಮಸ್ಯೆಗಳ ವಿರುದ್ಧ ಪ್ರತಿರೋಧವನ್ನು ವ್ಯಕ್ತಪಡಿಸುತ್ತಾಳೆ. ಸಮಾಜದಲ್ಲಿ ಮಹಿಳೆಯನ್ನು ನಡೆಸಿಕೊಂಡ ಬಗೆಗಿನ ಪಾತ್ರಗಳೆ ಕಾದಂಬರಿಗಳಲ್ಲಿ ಅಭಿವ್ಯಕ್ತಗೊಂಡಿದೆ. ದೇವನೂರ ಮಹಾದೇವ ಅವರ ಕಾದಂಬರಿ 'ಕುಸುಮಬಾಲೆ'ಯಲ್ಲಿ ಗಂಡನನ್ನು ಕಳೆದುಕೊಂಡು ಹನ್ನೆರಡು ತಿಂಗಳ ಬಳಿಕ ಸಂತಾನವನ್ನು ಪಡೆದು, ಗಂಡನ ಮನೆಯ ಪಾಲಿಗಾಗಿ ಬರುವ ಅಕ್ಕಮಹಾದೇವಮ್ಮನ ಮೇಲೆ ನಡೆಸುವ ದೌರ್ಜನ್ಯ ಸಾಮಾಜಿಕವಾಗಿ ನಡೆದುಕೊಂಡು ಬಂದಿರುವ ರೀತಿಯಾಗಿದೆ. ಮಹಿಳೆಯರು ವಿಧವೆಯಾದರೆ ತವರು ಮನೆಯವರಿಂದಲೂ, ಗಂಡನ ಮನೆಯವರಿಂದಲೂ ದೂಷಿಸುವ ಪದ್ಧತಿ ಅಮಾನವೀಯತೆಯ ಸಂಕೇತವಾಗದೆ, ಶುಭಕಾರ್ಯಗಳಲ್ಲಿ ಭಾಗವಹಿಸಬಾರದು. ಸಮಾಜದಲ್ಲಿ ಗೌರವವನ್ನು ನೀಡುವುದಿಲ್ಲ. ಹೆಂಡತಿ ಕಳೆದುಕೊಂಡವನು ಮತ್ತೆ ಮದುವೆಯಾಗಿ ಸಂಸಾರ ಸಾಗಿಸಬಹುದು. ಮಕ್ಕಳನ್ನು ಪಡೆಯಬಹುದೆಂಬ ಭಾವನೆಗಳು ಮಹಿಳೆಯ ವಿಷಯದಲ್ಲಿ ಕಟುಕತನದ ಅನುಕರಣೆಯಾಗಿ ಕಂಡುಬರುತ್ತದೆ. ಹೆಣ್ಣುಮಕ್ಕಳ ಜನನದ ಪೂರ್ವದಿಂದಲೂ ಶೋಷಣೆಗೆ ಒಳಗಾಗುವುದು ಕಂಡುಬರುತ್ತದೆ. ಗರ್ಭಿಣಿಯ ಉದರದಲ್ಲಿರುವಾಗಲೇ ಹೆಣ್ಣೆಂದು ತಿಳಿದರೆ ಭ್ರೂಣಹತ್ಯೆಯಾಗುತ್ತದೆ. ಅದನ್ನು ಮೀರಿ ಧರೆಗಿಳಿದರೆ ಹೆಣ್ಣುಮಗುವೆಂದು ತಾತ್ಸಾರ ಮನೋಭಾವನೆಯಿಂದ ಕಾಣುವುದು. ಶಿಕ್ಷಣದಲ್ಲಿ ಗಂಡುಮಗುವಿಗಿಂತ ಉನ್ನತಮಟ್ಟದ ಶಿಕ್ಷಣದ ಅಗತ್ಯವಿಲ್ಲವೆಂಬ ಧೋರಣೆಗಳು, ಬಾಲ್ಯವಿವಾಹದ ಬಂಧನಕ್ಕೆ ಒಳಪಡಿಸುವುದು ಹೆಣ್ಣು ಹೆತ್ತವರಿಗೆ ಮದುವೆ ಮಾಡಿದರೆ ಜೀವನದಲ್ಲಿ ಅವರ ಜವಾಬ್ದಾರಿ ಮುಗಿಯತ್ತೆಂದು ಗಡಿಬಿಡಿಯಲ್ಲಿ ಮದುವೆ ಮಾಡುವುದು. ಶಿಕ್ಷಣದಿಂದ ವಂಚಿತಳಾಗಿಸುವುದು. ಮಹಿಳೆಯರು ಸ್ವಾವಲಂಬನೆ ಬದುಕಿನ ಆಶಯವನ್ನು ತಂದೆ–ತಾಯಿಗಳೆ ಚಿವುಟುವುದು ಸಾಮಾಜಿಕ ವ್ಯವಸ್ಥೆಯಲ್ಲಿನ ಅಧೋಗತಿಯಾಗಿದೆ. ಮಹಿಳೆಯರ ಮೇಲಿನ ದೌರ್ಜನ್ಯಗಳು ಪಟ್ಟಿ ಬೆಳೆಯುತ್ತಲೆ ಸಾಗುತ್ತದೆ. ಪುರುಷವರ್ಗ ತನಗೆ ಅನುಕೂಲಕರವಾದ ವ್ಯವಸ್ಥೆಗಳನ್ನು ಸಾಮಾಜಿಕತೆಯ ಪರಿಧಿಯಡಿಯಲ್ಲೆ ಸ್ಥಾಪಿಸಿಕೊಂಡಿದ್ದಾರೆ. ಗೊಡ್ಡು ಆಚರಣೆಗಳನ್ನು ಪಾಲಿಸುವ ನೆಪದಲ್ಲಿ ಮಹಿಳೆಯರನ್ನು ದೈಹಿಕವಾಗಿ ಬಳಸಿಕೊಳ್ಳುತ್ತಿರುವ ಉದಾಹರಣೆಗಳು ಪ್ರಸ್ತುತದಲ್ಲಿ ನಿರ್ಮೂಲನೆಯಾಗಿಲ್ಲ. 'ಜೋಗಣಿ' ಆಚರಣೆಯನ್ನು ಮಾಡುವ ನೆಪದಲ್ಲಿ ತಳವರ್ಗದ ಮಹಿಳೆಯರನ್ನು ತಮ್ಮ ಅಗತ್ಯಗಳಿಗೆ ಬಳಸಿಕೊಂಡು ಸಮಾಜದಲ್ಲಿ ಮಹಿಳೆಯರ ಶೋಷಣೆಯನ್ನು ಮುಂದುವರಿಸಿದ್ದಾರೆ. ಗೀತಾ ನಾಗಭೂಷಣರವರ 'ಬದುಕು' ಕಾದಂಬರಿಯಲ್ಲಿ ಬರುವ ಭರಮ್ಮ ಮತ್ತು ಅವನ ಹೆಂಡತಿ ಮರಗಿಯರನ್ನು ಪೂಜಾರಿಯು ಕಪಟತನದಿಂದ ನೀಲವ್ವನನ್ನು ಜೋಗಣಿ ಬಿಡುವುದಾದರೆ ಭರಮ್ಮನ ರೋಗವನ್ನು ವಾಸಿಮಾಡುವುದಾಗಿ ವಂಚಿಸುತ್ತಾನೆ. ವಂಚನೆಯ ಮಾತುಗಳಿವು. ಮಾಪುರ ತಾಯಿ ಪೂಜಾರಪ್ಪನ ಮೈಯಾಗ ದೇವಿ ಬಂದು "ನಿನ್ ಮಗಳಿಗಿ ನನ್ ಸೇವಕ್ಕೆ ಬಿಡು ಆಕಿಗಿ ಜೋಗಣಿ ಮಾಡು, ನಿನ್ ಗಂಡನ ನಾ ಉಗಳಿ ಬಿಟಾಕ್ತೀನಿ! ಇಲ್ಲಂದ್ರ ಬಾಳೆಹಣ್ಣು ನುಂಗಂಗ ಭರಮ್ಯಾಗ ನುಂಗಿ ಬಿಡ್ತೀನೀ.. ಹುಷಾರ್.."[2] ಅಂತ ಹೇಳಿದ್ದ ಪೂಜಾರಿ ತಳವರ್ಗದ ಹೆಣ್ಣುಮಕ್ಕಳನ್ನು ಜೋಗಣಿ ಮಾಡುವುದರಿಂದ ಉನ್ನತವರ್ಗದ ವ್ಯಕ್ತಿಗಳ ಕಾಮದಾಹಕ್ಕೆ ಬಲಿಯಾಗುತ್ತಿದ್ದರು. ವೇಶ್ಯೆಯರನ್ನು ಸೃಷ್ಟಿಮಾಡುವವರು. ಪುರುಷ ವರ್ಗದವೆ ಕಳಂಕ ಮಾತ್ರ ಮಹಿಳೆಗೆ ಪ್ರತಿ ಸಾಮಾಜಿಕ ಕಂದಾಚಾರದಲ್ಲಿ ಮಹಿಳೆಯರನ್ನು ಧಮನಿಸುವ ವ್ಯವಸ್ಥೆ ವ್ಯವಸ್ಥಿತವಾಗಿ ರೂಪುಗೊಂಡಿದೆ. ಈ ವ್ಯವಸ್ಥೆಯನ್ನು ಅಸ್ಥಿರವಾಗಿ ಸಮಾಜದಲ್ಲಿ ಸಮಾನತೆಯ ಮನೋಭಾವನೆ

[2].ಗೀತಾ ನಾಗಭೂಷಣ. (2019). *ಬದುಕು.* ಪುಟ–37

ಬೆಳೆಯ ಬೇಕಾದರೆ ಮಹಿಳೆಯರು ಪ್ರಶ್ನಿಸುವ ವ್ಯವಸ್ಥೆಯನ್ನು ಮರುಸ್ಥಾಪಿಸುವ ಕಾರ್ಯಕ್ಕೆ ಸಿದ್ಧರಾಗಬೇಕೆಂಬುದು 'ಬದುಕು' ಕಾದಂಬರಿಯಲ್ಲಿನ ಗೀತಾನಾಗಭೂಷಣರ ಅಭಿಪ್ರಾಯವನ್ನು ಪಾಲಿಸಬೇಕಾಗಿದ್ದು, ಸಾಮಾಜಿಕ ವ್ಯವಸ್ಥೆಯಲ್ಲಿ ಅಸಮಾನತೆಯ ವಿರುದ್ಧ ಧ್ವನಿಗೂಡಿಸಿದಾಗ ಲಿಂಗಬೇಧಗಳು ನಿರ್ಮೂಲನೆಯಾಗಲು ಸಾಧ್ಯವಾಗುತ್ತದೆ. ಹೆಣ್ಣುಮಗುವಿನ ಹುಟ್ಟಿನಿಂದ ಸಾವಿನವರೆಗೂ ಕಳಂಕಿತವಾದ ಪಟ್ಟವನ್ನು ಕಟ್ಟಿದ್ದಾರೆ. ಹೆಣ್ಣಾಗಿ ಹುಟ್ಟಿದರೆ ಮೋಕ್ಷ ಪಡೆಯಲು ಸಾಧ್ಯವಿಲ್ಲ. ಮೋಕ್ಷ ಪಡೆಯದಿದ್ದರೆ ಮರಣದ ನಂತರ ಸ್ವರ್ಗ ಪ್ರಾಪ್ತಿಯಾಗದೆಂಬ ಭಾವನೆಗಳು ಬದಲಾಗುತ್ತಿವೆ. ಸಂಪೂರ್ಣವಾಗಿ ಮಹಿಳೆಯ ಮೇಲಿನ ದೃಷ್ಟಿಕೋನಗಳು ಬದಲಾಗಬೇಕು. ಗಂಡು–ಹೆಣ್ಣು ಸಮಾನರೆಂಬ ಭಾವನೆಗಳು ಸಾರ್ವತ್ರಿಕವಾಗಿ ಅಂಗೀಕಾರವಾಗಬೇಕು. ಗಂಡಿಗೆ ಸಮಾನವಾದ ಶಿಕ್ಷಣ ನೀಡಬೇಕು. ವೈವಾಹಿಕ ಜೀವನ ಸಂಗಾತಿಯ ಆಯ್ಕೆ ಹೆಣ್ಣುಮಗುವಿಗೆ ನೀಡಬೇಕು. ಉದ್ಯೋಗದಲ್ಲಿ ಸಮಾನತೆಯನ್ನು ನೀಡಬೇಕು. ಕುಟುಂಬದಲ್ಲಿ ಸೇವಾ ಮನೋಭಾವನೆಯನ್ನು ಕೀಳುಮಟ್ಟದ ದೃಷ್ಟಿಕೋನವನ್ನು ಬದಲಿಸಿ, ಪುರುಷ ಸಮಾನ ಗೌರವವನ್ನು ನೀಡಬೇಕು. ಹೊರ ಜಗತ್ತಿನಲ್ಲಿ ಉದ್ಯೋಗದ ಸ್ಥಳದಲ್ಲಿ ಮಹಿಳೆಯರು ಪುರುಷ ಸರಿಸಮಾನರೆಂದು ಪರಿಗಣಿಸಿ, ಪುರುಷರಷ್ಟೆ ಸಂಭಾವನೆಯನ್ನು ನೀಡಿದಾಗ ಸಾಮಾಜಿಕವಾಗಿ ಮಹಿಳೆಯರ ಮೇಲಿನ ದೃಷ್ಟಿಕೋನ ಬದಲಾಗಿ, ಹೆಣ್ಣುಮಕ್ಕಳು ಸಮಾಜದಲ್ಲಿ ಸರಿಸಮಾನತೆ ಬದುಕು ನಡೆಸಲು ಸಾಧ್ಯವಾಗುತ್ತದೆ.

ಜಾಗತಿಕವಾಗಿ ನಾವು ಎಷ್ಟೇ ಮುಂದುವರೆದಿದ್ದರೂ ಮಾನಸಿಕವಾಗಿ ಮಹಿಳೆಯ ಮೇಲಿನ ಪೂರ್ವಗ್ರಹ ದೃಷ್ಟಿಕೋನಗಳು ಬದಲಾಗದ ಸಮಾಜ ಅಧಃಪತನದ ಹಾದಿಯಲ್ಲಿದೆ. ಪ್ರಸ್ತುತದಲ್ಲಿ ಭಾರತದ ಹೆಣ್ಣು ತನ್ನನ್ನು ಆಧುನಿಕ ಸಮಾಜದ ಪ್ರಮುಖ ಭಾಗವಾಗಿ ಹಲವಾರು ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದ್ದರು. ಮನೆಯ ಸಾಮಾಜಿಕ ಅಂಗಸಂಸ್ಥೆಯಲ್ಲಿ ಹೊರಗಿನ ಸಮಾಜದಲ್ಲಿ ನರಕಯಾತನೆ ಅನುಭವಿಸುತ್ತಿದ್ದಾಳೆ. ಗಂಡು ನಿರ್ವಹಿಸುವ ಪ್ರತಿಯೊಂದು ಕಾರ್ಯಕ್ಷೇತ್ರಗಳಲ್ಲಿ ಹೆಣ್ಣಿನ ಹೆಜ್ಜೆ ಗುರುತು ಕಾಣಿಸಿಕೊಂಡು ಗಂಡಿನ ಸರಿಸಮಾನವಾದ ಬದುಕಿನ ಭರವಸೆಯ ಹಾದಿಯಲ್ಲಿ ಸಾಗಿದ್ದಾರೆ. ಮಹಿಳೆಯರು, ಗಂಡು–ಹೆಣ್ಣೆಂಬ ಲಿಂಗಭೇದವನ್ನು ಮರೆತು ಸರಿಸಮಾನರೆಂಬ ಭಾವನೆಯು ಸಾಮಾಜಿಕವಾಗಿ ತಳಸ್ಥರದಿಂದ ಬದಲಾದಾಗ ಸಾಮಾಜಿಕವಾಗಿ ಹೆಣ್ಣಿನ ಬಗೆಗಿನ ದೃಷ್ಟಿಕೋನಗಳು ಬದಲಾಗಿ ಮಹಿಳೆಯರ ಬದುಕು ಹಸನಾಗುತ್ತದೆ. ಮಾತೃಪ್ರಧಾನದ ಮಹಿಳೆಯ ದೃಷ್ಟಿಕೋನಗಳು ಮರುಕಳಿಸಿದಾಗ, ಪಿತೃಪ್ರಧಾನ ತಪ್ಪುಗ್ರಹಿಕೆಗಳು ದೂರವಾಗಿ, ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣಿನ ಬಗೆಗಿನ ತಪ್ಪುಗ್ರಹಿಕೆಗಳು ದೂರಾಗುತ್ತದೆ.

ಒಟ್ಟಾರೆಯಾಗಿ ಕನ್ನಡ ಸಾಹಿತ್ಯದಲ್ಲಿನ ಮಹಿಳೆಯರ ಕುರಿತ ದೃಷ್ಟಿಕೋನಗಳು ಬದಲಾವಣೆಯತ್ತ ಸಾಗಿದೆ. ಸಂಪೂರ್ಣವಾದ ಬದುಕಿನ ಸ್ವಾತಂತ್ರ್ಯವನ್ನು ಹೊಂದುವಲ್ಲಿ ಮಹಿಳೆಯರು ಮುಂದಾಗಿದ್ದು, ಮುಂದಿನ ದಿನಮಾನಗಳಲ್ಲಿ ಗಂಡಿನ ಸರಿಸಮಾನತೆಯ ರಾಜಕೀಯ ಕ್ಷೇತ್ರದಲ್ಲಿ, ಶಿಕ್ಷಣ ಕ್ಷೇತ್ರದಲ್ಲಿ, ರಕ್ಷಣ ಕ್ಷೇತ್ರದಲ್ಲಿ ದೊರಕಿದ್ದಲ್ಲಿ ಮಹಿಳಾ ಹೋರಾಟಗಾರರ ಕನಸು ನನಸಾಗುವ ಸಮಯ ಹತ್ತಿರವಿರುವಾಗಲೇ ಸಮಾಜದಲ್ಲಿ ಹೆಣ್ಣುಮಕ್ಕಳ ಮೇಲೆ ಹೊಸ ಹೊಸ ಸಮಸ್ಯೆಗಳು ಎದುರಾಗುತ್ತಿದ್ದು ಸಮಾಜದಲ್ಲಿ ನಿರ್ಭಯವಾಗಿ ವ್ಯವಹರಿಸಲು ತಕ್ಕ ವಾತಾವರಣ ಕಾಣೆಯಾಗುತ್ತಿದೆ. ಹೆಣ್ಣುಮಕ್ಕಳ ಅಪಹರಣ, ಅಪ್ರಾಪ್ತ ಹೆಣ್ಣುಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ, ಅತ್ಯಾಚಾರಗಳು, ಕೊಲೆಗಳು, ಮಾನವ ಕಳ್ಳಸಾಗಣೆ, ಬಲವಂತದ ವೇಶ್ಯಾವಾಟಿಕೆದಂಥೆ, ಎಲೆಕ್ಟ್ರಾನಿಕ್ ಮಾಧ್ಯಮಗಳಿಂದ ಹೆಣ್ಣಿನಶೀಲ ಹಾನಿಯಾಗುವರೆಗೆ ಹೊಸ ಹೊಸ ಆಯಾಮಗಳಲ್ಲಿ ಶೋಷಣೆ ಹೊಸ

ರೂಪು ಪಡೆದುಕೊಂಡಿದ್ದು, ಮತಾಂತರದ ವಿಷಯದಲ್ಲಿ ಸ್ವಲ್ಪ ಹೆಚ್ಚಾಗಿಯೇ ಮಹಿಳೆಯರು ಶೋಷಣೆಗೆ ಒಳಗಾಗಿದ್ದು. ಈ ಸಮಸ್ಯೆಗಳಿಂದ ಧೈರ್ಯಮಾಡಿ ಹೊರಬಂದು ಸಾಮಾಜಿಕ ವ್ಯವಸ್ಥೆಯಲ್ಲಿ ವ್ಯವಹರಿಸುವ ಮಹಿಳೆ ವರ್ಗ ಮತ್ತೆ ನಾಲ್ಕುಗೋಡೆಯ ಒಳಗೆ ಸೇರಿಕೊಳ್ಳುವಂತಹ ವಾತಾವರಣ ನಿರ್ಮಾಣವಾಗುವುದನ್ನು ವಿಫಲಗೊಳಿಸದ ಹೊರತು ಬೇರೆ ದಾರಿಯಿಲ್ಲ.

**ಪರಾಮರ್ಶನ ಗ್ರಂಥಗಳು**


- ಶ್ರೀಮತಿ, ಎಚ್.ಎಸ್. (2006). *ಮಹಿಳಾ ಸಾಹಿತ್ಯ ಚರಿತ್ರೆ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಶ್ರೀಮತಿ, ಎಚ್.ಎಸ್. (2012). *ಸ್ತ್ರೀವಾದಿ ಸಂಶೋಧನೆ ವಿಧಿ–ವಿಧಾನಗಳು.* ಬರಹ ಪಬ್ಲಿಷಿಂಗ್ ಹೌಸ್,
- ಶೈಲಜಾ ಶರಣಗೌಡ. (ಸಂ.) (2022). *ಮಹಿಳಾ ಸಾಹಿತ್ಯ.* ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ.
- ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ (ಸಂ.). (2014). *ಸ್ತ್ರೀವಾದಿ ಸಾಹಿತ್ಯ ವಿಮರ್ಶೆ.* ಅಭಿನವ.